ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 13/12/19

## ಸರಕಾರದ ನಾನಾ ಇಲಾಖೆಗಳ ಮಾಹಿತಿ ಸಂಗ್ರಹಕ್ಕೆ ಸಂಪುಟ ಉಪ ಸಮಿತಿ ರಚನೆ

# ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ತೀರ್ಮಾನ

13/12

**■ ವಿಕ ಸುದ್ದಿಲೋಕ** ಬೆಂಗಳೂರು

ಸರಕಾರದ ನಾನಾ ಇಲಾಖೆಗಳಲ್ಲಿ ಬ್ಯಾಕ್‌ಲಾಗ್ ಹುದ್ದೆ ಭರ್ತಿ ಮಾಡುವ ಸಂಬಂಧ ವರದಿ ಪಡೆಯಲು ಡಿಸಿಎಂ ಗೋವಿಂದ ಕಾರಜೋಳ ಅಧ್ಯಕ್ಷತೆಯಲ್ಲಿಸಂಪುಟ ಉಪಸಮಿತಿ ರಚಿಸಲಾಗಿದೆ.

ಸಿಎಂ ಬಿಎಸ್‌ವೈ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಡಿಸಿಎಂ ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಚಿವರಾದ ಜಗದೀಶ ಶೆಟ್ಟರ್, ಸುರೇಶ್‌ಕುಮಾರ್, ಶ್ರೀರಾಮುಲು ಅವರನ್ನು ಸಮಿತಿ ಸದಸ್ಯರಾಗಿ ನೇಮಿಸಲಾಗಿದೆ. ಆದಷ್ಟು ಶೀಘ್ರದಲ್ಲಿ ವರದಿ ನೀಡುವಂತೆ ಸೂಚಿಸಲಾಗಿದೆ ಎಂದು ಸಂಪುಟ ಸಭೆ ವಿವರ ಒದಗಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ತಿಳಿಸಿದರು.

ರಾಯಚೂರು, ಹಾವೇರಿ, ಮಂಗಳೂರು, ಚಿಕ್ಕಮಗಳೂರು, ಮಂಡ್ಯ, ಚಾಮರಾಜನಗರ, ಕಲಬುರ್ಗಿ, ಕೋಲಾರ, ಹಾಸನ, ಧಾರವಾಡದಲ್ಲಿ ಮಹಿಳಾ ಕ್ರೀಡಾಪಟುಗಳಿಗೆ ಪ್ರತ್ಯೇಕ ವಸತಿ ನಿಲಯ ನಿರ್ಮಿಸಲು 15 ಕೋಟಿ ಒದಗಿಸಲು ಅನುಮೋದನೆ ನೀಡಲಾಗಿದೆ. ಭಾಗ್ಯಲಕ್ಷ್ಮೀ ಯೋಜನೆ ಸಂಬಂಧ ಎಲ್‌ಐಸಿ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದದ ಅವಧಿಯನ್ನು 2020ರ ಮಾರ್ಚ್ 31ರ ವರೆಗೆ ವಿಸ್ತರಿಸಲಾಗಿದೆ ಎಂದರು.

### ಸಮವಸ್ತ್ರಕ್ಕೆ 10.27 ಕೋಟಿ ರೂ.



**62,058 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 3,300 ಸಹಾಯಕಿಯರಿಗೆ ಸಮವಸ್ತ್ರ ಯೋಜನೆಯಡಿ ಸೀರೆ ವಿತರಿಸಲು 2019-20ರಲ್ಲಿ 10.27 ಕೋಟಿ ರೂ. ಬಿಡುಗಡೆ ಮಾಡಲು ಸಮ್ಮತಿಸಲಾಗಿದೆ. ಪ್ರತಿಯೊಬ್ಬರಿಗೂ 2 ಸೀರೆ ನೀಡಲಾಗುತ್ತದೆ ಎಂದು ಸಚಿವ ಮಾಧುಸ್ವಾಮಿ ಹೇಳಿದರು.**

### ಧರ್ಮಸ್ಥಳಕ್ಕೆ ನೀರು

ಶ್ರೀಕ್ಷೇತ್ರದ ಧರ್ಮಸ್ಥಳದ ನೀರಿನ ಅಭಾವ ನೀಗಿಸುವ ಉದ್ದೇಶದಿಂದ ಮೊಳಕಾರು ಬಳಿಯ ನೆರಿಯಾ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟೆ ನಿರ್ಮಿಸಲು 14.97 ಕೋಟಿ ರೂ. ಅನುದಾನ ಕೊಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

### ಮೆಡಿಕಲ್ ಕಾಲೇಜಿಗೆ 525 ಕೋಟಿ

ಬೈ ಎಲೆಕ್ಷನ್‌ನಲ್ಲಿ ಭಾರಿ ಸದ್ದು ಮಾಡಿದ್ದ ಚಿಕ್ಕಬಳ್ಳಾಪುರ ಮೆಡಿಕಲ್ ಕಾಲೇಜು ಮೂಲಸೌಕರ್ಯಕ್ಕೆ 525 ಕೋಟಿ ರೂ. ಅನುದಾನ ಒದಗಿಸಲು ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ.

### ಪಟ್ಟದಕಲ್ಲಿನಲ್ಲಿ ಪ್ರವಾಸಿ ಪ್ಲಾಜಾ

ಪಟ್ಟದಕಲ್ಲಿನಲ್ಲಿ 24 ಎಕರೆ ಜಮೀನು ಖರೀದಿಸಿ 29.25 ಕೋಟಿ ರೂ. ವೆಚ್ಚದಲ್ಲಿ ಪ್ರವಾಸಿ ಪ್ಲಾಜಾ ನಿರ್ಮಿಸುವ ಪ್ರಸ್ತಾವಕ್ಕೆ ಸಮ್ಮತಿಸಲಾಗಿದೆ. ಇದರಡಿ ರೆಸ್ಟೋರೆಂಟ್, ಥಿಯೇಟರ್, ಸ್ಥಳೀಯ ಕಲೆಗಳ ಪ್ರದರ್ಶನ ಪ್ರಾಂಗಣ ನಿರ್ಮಾಣಗೊಳ್ಳಲಿವೆ ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು.

### ಸಂಪುಟ ತೀರ್ಮಾನಗಳು

- ಸರಕಾರಿ ಸೌಲಭ್ಯಕ್ಕಾಗಿ ಆರ್ಯ ವೈಶ್ಯ ಸಮಾಜದವರಿಗೆ ಜಾತಿ ಪ್ರಮಾಣ ಪತ್ರ
- ಕೃಷಿ ಮತ್ತು ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳು ನಬಾರ್ಡ್‌ನಿಂದ 2019-20ರಲ್ಲಿ ಪಡೆಯುವ 1,500 ಕೋಟಿ ರೂ. ಸಾಲಕ್ಕೆ ಸರಕಾರದ ಖಾತರಿ
- ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಪರಿಶಿಷ್ಟ ಐಟಿಐ ಅಭ್ಯರ್ಥಿಗಳಿಗೆ ವಿತರಿಸಲು 5,331 ಲ್ಯಾಪ್‌ಟಾಪ್ ಖರೀದಿಗೆ 16.98 ಕೋಟಿ ಬಿಡುಗಡೆಗೆ ಸಮ್ಮತಿ
- ವಿಜಯಪುರ ಜಿಲ್ಲೆಯ ತಿಕೋಟ ಗ್ರಾ.ಪಂ, ಕಲಬುರ್ಗಿ ಜಿಲ್ಲೆಯ ಕಮಲಾಪುರ ಗ್ರಾ.ಪಂಗಳು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲು ಒಪ್ಪಿಗೆ
- 2 ಸಾವಿರ ವಿಕಲಚೇತನರಿಗೆ ಯಂತ್ರಚಾಲಿತ ವಾಹನ ಖರೀದಿಗೆ 15 ಕೋಟಿ
- ಕೌಶಲ್ಯ ಮಿಷನ್, ವಿಶ್ವೇಶ್ವರಯ್ಯ ತರಬೇತಿ ಕೇಂದ್ರ ಸೇರಿದಂತೆ ಕೌಶಲ್ಯಕ್ಕೆ ಸಂಬಂಧಿಸಿದ ನಾನಾ ವಿಭಾಗಗಳನ್ನು ಕೌಶಲ್ಯಾಭಿವೃದ್ಧಿ ನಿಗಮದಡಿ ತರಲು ಒಪ್ಪಿಗೆ
- ಹೊಸಪೇಟೆಯ ಗಣಿ ಬಾಧಿತ ಪಾಪಿನಾಯಕನಹಳ್ಳಿ ಸುತ್ತಮುತ್ತಲ ಗ್ರಾಮಗಳಿಗೆ ನೀರು ಪೂರೈಸುವುದು ಹಾಗೂ 18 ಕೆರೆ ತುಂಬಿಸುವುದು, 4 ಚೆಕ್ ಡ್ಯಾಂ ನಿರ್ಮಿಸುವ ಯೋಜನೆಗೆ 243.35 ಕೋಟಿ ರೂ. ಮಂಜೂರಿಗೆ ಸಮ್ಮತಿ.
- ವಿಜಯಪುರದ ಕೊಲ್ಹಾರ ಪುನರ್ವಸತಿ ಕೇಂದ್ರಕ್ಕೆ 50 ಕೋಟಿ ನೀಡುವ ಕೆಬಿಜೆಎನ್‌ಎಲ್ ಪ್ರಸ್ತಾವಕ್ಕೆ ಸಮ್ಮತಿ.
- ಲೋಕಾಯುಕ್ತರ ಕಾರ್ಯಭಾರ ಹೆಚ್ಚಿದಾಗ ನಿರ್ದಿಷ್ಟ ಪ್ರಕರಣಗಳನ್ನು ಉಪ ಲೋಕಾಯುಕ್ತರಿಗೆ ವಹಿಸಲು ನಿಯಮ ತಿದ್ದುಪಡಿಗೆ ಸಮ್ಮತಿ
- ಕಲಬುರ್ಗಿ ಜಿಲ್ಲೆಯ ಅಫಜಲ್‌ಪುರದ ಚೋಳನೂರು ಬಳಿ 72 ಕೋಟಿ ರೂ. ವೆಚ್ಚದಲ್ಲಿ ಭೀಮಾ ನದಿಗೆ ಸೇತುವೆ ನಿರ್ಮಿಸಲು ಸಮ್ಮತಿಸಲಾಗಿದೆ.